RNU AIR DHARWAD

AUGUST 09, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು, ಶ್ರಾವಣ ಮಾಸದ, ನೂಲು ಹುಣ್ಣಿಮೆ. ಸಹೋದರ–ಸಹೋದರಿಯರ, ಬಾಂಧವ್ಯ, ಸುರಕ್ಷೆ, ವಾತ್ಸಲ್ಯದ ದ್ಯೋತಕವಾದ, ರಕ್ಷಾ ಬಂಧನದ ಸಂಭ್ರಮ, ನಾಡಿನಾದ್ಯಂತ ಕಳೆಗಟ್ಟಿದೆ.

<><><>

ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ರಾಷ್ಟ್ರೀಯ ಸ್ವಯಂಸೇವಕ ಸಂಘ, ಸಾಮೂಹಿಕ ರಕ್ಷಾ ಬಂಧನದ, ನಗರ ಉತ್ಸವ ಆಯೋಜಿಸಿವೆ.

<><><>

ಇಂದು ರಾತ್ರಿ 8 ಗಂಟೆಗೆ, ಲಕ್ಷಾಂತರ ಆರ್.ಎಸ್.ಎಸ್. ಸ್ವಯಂಸೇವಕರು, ನಾಡಿನ ವಿವಿಧೆಡೆ, ಗಣವೇಶದಲ್ಲಿ ಭಾಗವಹಿಸಿ, ಪರಸ್ಪರ ರಕ್ಷೆ ಕಟ್ಟಲಿದ್ದಾರೆ. ಹಿರಿಯ ಪ್ರಚಾರಕರಿಂದ, ಬೌದ್ಧಿಕ್ ಆಯೋಜಿತವಾಗಿದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಗಣ್ಯರು, ನಾಡಿನ ಜನತೆಗೆ, ರಕ್ಷಾ ಬಂಧನದ ಶುಭಾಶಯ ಕೋರಿದ್ದಾರೆ.

<><><>

ನರೇಂದ್ರ ಮೋದಿ ಅವರ ಪರಿಕಲ್ಪನೆಯ, ಆತ್ಮನಿರ್ಭರ ಭಾರತ ಸಂಕಲ್ಪದಡಿ, ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕಗಳ, ನಿಯಬದ್ಧಗೊಳಿಸುವಿಕೆ, ಪಿ.ಎಂ.ಎಫ್.ಎಂ.ಇ ಯೋಜನೆ ಪ್ರಗತಿ ಕುರಿತು, ವಿಜಯಪುರ ಜಿಲ್ಲಾಧಿಕಾರಿ, ಕೆ.ಆನಂದ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಕೆ. ಆನಂದ ಧ್ವನಿ 40 ಸೆಕೆಂದುಗಳು

<><><>

ಪಿ.ಎಂ.ಎಫ್.ಎಂ.ಇ ಯೋಜನೆಯನ್ನು, 2026ರ ಮಾರ್ಚ್ 31 ರಿಂದ 2028ರ ಮಾರ್ಚ್ 31ರ ವರೆಗೆ, 2 ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ ಎಂದು, ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ, ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ನವೀನ ವಾಹನ ಸಂವರ್ಧನೆ, ಪಿ.ಎಂ. ಇ–ಡ್ರೈವ್ ಯೋಜನೆಯ ಅವಧಿಯನ್ನು, ನಾಲ್ಕು ವ ರ್ಷಗಳಿಗೆ ವಿಸ್ತರಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ.

<><><>

ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಸ್ಕೂಲ್ಸ್ ಫಾರ್ ರೈಸಿಂಗ್ ಇಂಡಿಯಾ, ಪಿ.ಎಂ.ಶ್ರೀ. ಯೋಜನೆಯಡಿ, ಪ್ರಸಕ್ತ ಸಾಲಿಗೆ, ತುಮಕೂರು ಜಿಲ್ಲೆ ತಿಪಟೂರು ತಾಲೂಕು, ನೊಣವಿನಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಯ್ಕೆಯಾಗಿದೆ. ವ್ಯಕ್ತಿತ್ವ ವಿಕಸನ, ಕ್ರೀಡೆ, ಯೋಗ, ಆತ್ಮ ರಕ್ಷಣಾ ಕಲೆ ಸೇರಿದಂತೆ, ಗ್ರಾಮೀಣ ವಿದ್ಯಾರ್ಥಿಗಳಲ್ಲಿ, ಸುದೃಢ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ, ಪೂರಕ ವಾತಾವರಣ, ಅತ್ಯುತ್ತಮ ಕಲಿಕಾ ತಾಣವಾಗಿ, ಸರ್ಕಾರಿ ಶಾಲೆಯನ್ನು ಸರ್ವಾಂಗ ಸುಂದರವಾಗಿ, ಪಿ.ಎಂ.ಶ್ರೀ ಯೋಜನೆ ಅಡಿ, ರೂಪಿಸಲಾಗುತ್ತಿದೆ.

<><><>

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶಕರು ಹಾಗೂ ಸಂಶೋಧನಾ ನಿರ್ದೇಶಕರ ನೇತೃತ್ವದಲ್ಲಿ, ಬಾದಾಮಿ ತಾಲೂಕು ಚೊಳಚಗುಡ್ಡ ಗ್ರಾಮದ, ವೀಳ್ಯದೆಲೆಗೆ ಭೌಗೋಳಿಕ ಮಾನ್ಯತೆ – ಜಿ.ಐ. ಟ್ಯಾಗ್ ದೊರಕಿಸಲು, ತಜ್ಞರ ತಂಡ ಕ್ಷೇತ್ರ ಭೇಟಿ ಕೈಗೊಂಡಿತು. ವೀಳ್ಯದೆಲೆ ಬೆಳೆಯುವ, ಮೌನೇಶ ಮರಡಿ, ರುದ್ರಗೌಡ ಮತ್ತು ಜಿ.ಎಸ್. ಪಾಟೀಲ ಅವರ ತೋಟಕ್ಕೆ ಭೇಟಿ ನೀಡಿ, ಅಂಬಾಡಿ ತಳಿ, ವೀಳ್ಯದೆಲೆ ತಾಕು ವೀಕ್ಷಿಸಿದರು.

<><><>

ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1–9–3–0 ಆರಂಭಿಸಿದೆ. ಆನ್ಲೈನ್ ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ವರದಿ ಮಾಡಲು ಅನುವು ಮಾಡುತ್ತದೆ. ರಾಜ್ಯ ಮಟ್ಟದ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ ಹಾಗೂ ಸಾರ್ವಜನಿಕ ಸಂಪರ್ಕ ಅಭಿಯಾನಗಳಲ್ಲಿ, ಸೈಬರ್ ಜಾಗೃತಿ ಅಭಿಯಾನ ಕೈಗೊಳ್ಳಲಾಗುತ್ತಿದೆ.

<><><>

ಕನ್ನಡಕ್ಕೆ 5ನೇ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ, ವಿನಾಯಕ ಕೃ ್ಣ ಗೋಕಾಕರ, ಜಯಂತಿ ಇಂದು. 'ಭಾರತ ಸಿಂಧು ರಶ್ಮಿ' ವಿನಾಯಕರು ರಚಿಸಿದ ಮಹಾಕಾವ್ಯ. "ಗೋಕಾಕ್ ವರದಿ" ಮೂಲಕ, ಕನ್ನಡಕ್ಕೆ ಶಾಲಾ ಶಿಕ್ಷಣದಲ್ಲಿ ಸಲ್ಲಬೇಕಾದ ನ್ಯಾಯಯುತ ಸ್ಥಾನವನ್ನು ದೊರಕಿಸಿಕೊಟ್ಟ, ಆಂಗ್ಲ ಭಾಷೆ ಅಧ್ಯಾಪಕ ವಿ.ಕೃ. ಗೋಕಾಕರು ಎಂಬುದು. ಮನನೀಯ. ರಾಜ್ಯಸಭೆ ಸಂಸದ ಈರಣ್ಣ ಕಡಾಡಿ ಸೇರಿದಂತೆ, ನಾಡಿನ ಗಣ್ಯರು, ಗೋಕಾಕರ ಕೊಡುಗೆಯನ್ನು ಸ್ಮರಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಆಕಾಶವಾಣಿಯ ಬಹುಶ್ರುತ ಕಾರ್ಯಕ್ರಮ, 'ಮನ್ ಕಿ ಬಾತ್', ಹೆಚ್ಚುವರಿ ವೆಚ್ಚಗಳಿಲ್ಲದೆ, ಅಸ್ತಿತ್ವದಲ್ಲಿರುವ ಆಂತರಿಕ ಸಂಪನ್ಮೂಲಗಳನ್ನೇ ಬಳಸಿಕೊಂಡು, ಪ್ರಾರಂಭವಾದಾಗಿನಿಂದ, 124 ಸಂಚಿಕೆಗಳಿಗೆ, 34 ಕೋಟಿ 13 ಲಕ್ಷ ರೂಪಾಯಿ ಆದಾಯ, ಆಕಾಶವಾಣಿಗೆ ಒದಗಿಸಿದೆ ಎಂದು, ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ, ಎಲ್. ಮುರುಗನ್ ರಾಜ್ಯಸಭೆಗೆ, ತಿಳಿಸಿದ್ದಾರೆ.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ.ದೇಶಪಾಂಡೆ ಸಭಾಭವನದಲ್ಲಿ, ಸಂಜೆ 6 ಗಂಟೆಗೆ, ಕ್ಯಾಪ್ಟನ್ ಬಿ.ಸಿ ಕಲ್ಮಠ ದತ್ತಿ, 'ಕಾಕೋರಿ ಚಳವಳಿಯ, ಶತಮಾನದ ಸ್ಮರಣೆ' ಉಪನ್ಯಾಸ ಜರುಗಲಿದೆ.

<><><>

**ಶಿವಶರಣ, ಶ್ರೀ ನುಲಿಯ ಚಂದಯ್ಯನವರ, ಜಯಂತ್ಯುತ್ಸವ ಇಂದು ನಾಡಿನಾದ್ಯಂತ ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಮಧ್ಯಾಹ್ನ ಮೂರು ಗಂಟೆಗೆ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ.**

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.